ಸಾಕ್ಷಿಯ ಹೆಸರು : ರಮಾನಂದ ಐ ನಾಯ್ಕ.

**ದಿನಾಂಕಃ 10.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ಸಿ.ಎಲ್.ಎ.ಡಿ.ಸಿ. ವಕೀಲರಿಂದಃ-**

6. ನಿಪಿ-98 ಪ್ರಮಾಣ ಪತ್ರದಲ್ಲಿ ನಾನು ಬಳಿಸಿದ ಕ್ಯಾಮರಾ ಯಾವ ಕಂಪನಿಗೆ ಸೇರಿದ್ದು ಹಾಗೂ ಯಾರಿಗೆ ಸಂಬಂಧಿಸಿದ್ದು ಎಂದು ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ಸದರಿ ಕ್ಯಾಮರಾವು ಸುಸ್ಥಿತಿಯಲ್ಲಿ ಇದ್ದ ಬಗ್ಗೆ ನಮೂದಿಸಿದಲ್ಲ ಎಂದರೆ ಸರಿ. ಶವ ಪರೀಕ್ಷೆ ಕುರಿತು ವೈದ್ಯರಿಗೆ ಕೋರಿಕೆ ಪತ್ರ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ವೈದ್ಯಾಧೀಕಾರಿಗಳು ಅಬುತಾಲಿಬ್ ರವರ ಶವ ಪರೀಕ್ಷೆ ನಡೆಸಿಲ್ಲ ಎಂದರೆ ಸರಿಯಲ್ಲ. ಮೃತನ ಬಟ್ಟೆಗಳನ್ನ ವೈದ್ಯಾಧೀಕಾರಿಗಳು ನನ್ನ ತಾಬಾ ಕ್ಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ಪಂಚನಾಮೆಯನ್ನು ನಾನು ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ-4 ಪಂಚನಾಮೆ ಕಾಲಕ್ಕೆ ನಾನು ಹಾಜರಿರಲಿಲ್ಲ, ಹಾಗೂ ಅದರ ಬರವಣಿಗೆ ನಾನು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-24 ಪಂಚನಾಮೆ ಕಾಲಕ್ಕೆ ನಾನು ಹಾಜರಿರಲಿಲ್ಲ, ಹಾಗೂ ಅದರ ಬರವಣಿಗೆ ನಾನು ಮಾಡಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮುಂದೆ ನಾನು ಬಟ್ಟೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-36 ಪಂಚನಾಮೆ ಕಾಲಕ್ಕೆ ಸಹ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳು ಎಂ.ಓ.8 ರಿಂದ 10 ಮೃತನಿಗೆ ಸಂಬಂಧಿಸಿದವು ಅಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾಸಾ-10 ರವರು ಯಾವುದೇ ಮೊಬೈಲ್ ನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-15 ಪಂಚನಾಮೆ ಗಣಕೀಕರಣ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-18 ರಿಂದ 21 ಮೊಬೈಲ್ Screen Shot ಗಳು ಈ ಪ್ರಕರಣಕ್ಕೆ ಸಂಬಂಧಸಿದವು ಅಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ ನಿಪಿ-98 ರಂತೆ ಸುಳ್ಳು 65(ಬಿ) ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-42 ರಂತೆ ಜಪ್ತು ಪಂಚನಾಯನ್ನು ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ-46 ರಲ್ಲಿ ಪಂಚನಾಮೆಯಲ್ಲಿ ಯಾವುದೇ ವಸ್ತು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-50 ರಿಂದ ನಿಪಿ-52 ಈ ಪ್ರಕರಣಕ್ಕೆ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1, 10 ರಿಂದ 26 ರವರ ಹೇಳಿಕೆಗಳನ್ನು ಗಣಕೀಕೃತ ಮಾಡಿಲ್ಲ ಹಾಗೂ ಅವರು ತನಿಖಾಧಿಕಾರಿಗಳ ಮುಂದೆ

ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ ಪ್ರಕರಣಕ್ಕೆ ಅನುಕೂಲುವಾಗುವಂತೆ ಸೃಷ್ಠಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ – ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ